ವಿದುರನ ಬಳಿಗೆ ಬಂದ ಕೃಷ್ಣನ ಆಗಮನವನ್ನು ವಿವರಿಸುವಲ್ಲಿ 'ವೇದದರಿಕೆಗಳವಡದ...' 'ನಿಜವನರಿಯದನಾದಿ ಸಿದ್ಧನ ಬರವ ಕಂಡನು ಬಾಗಿಲಲಿ ವಿದುರ' ಎಂದರೆ ಚಾಮರಸನು ಕಲ್ಯಾಣಕ್ಕೆ ಬಂದ ಅಲ್ಲಮ ಬಸವನ ಬಳಿಗೆ ಬರುವುದನ್ನು 'ವೇದಶಾಸ್ತ್ರಗಳಿಗೆ ನಿಲುಕದ'...'ಆದಿ ಮಧ್ಯಾಂತಗಳಿಲ್ಲದನಾದಿ ಸಿದ್ಧನು...' ಎನ್ನುತ್ತಾನೆ. ಬಸವದಂಡಾಧಿಪನು ಅಲ್ಲಮನನ್ನು ಬರಮಾಡಿಕೊಳ್ಳುವಲ್ಲಿ ಅವನ ಸುತ್ತಲಿದ್ದ ಸಮೂಹ ಮಾವುತರು, ಸಾರಥಿಗಳು, ಕರಣಿಕರು, ಕವಿಗಳು, ವಿದ್ವಾಂಸರು, ಭರತ ಮುನಿಯ ನಾಟ್ಯಶಾಸ್ತ್ರ ಪರಿಣತರು, ನಾನಾ ಬಗೆಯ ಕಾರ್ಯಸೇವಕರು ಇದ್ದರೆಂಬುದು, ಕುಮಾರವ್ಯಾಸನ ಉದ್ಯೋಗ ಪರ್ವದಲ್ಲಿ ದುರ್ಯೋಧನನ ಆಸ್ಥಾನದ ನೆನಪನ್ನು ತರುತ್ತದೆ. ಅಷ್ಟೇ ಅಲ್ಲ, ಅಲ್ಲಮನನ್ನು ಕುರಿತ ಅವನ ನಿಸ್ಸೀಮತ್ವವನ್ನು ಕುರಿತು ಚಾಮರಸ ಹೇಳುವ ಅನುಭಾವಿಕ ಮಾತುಗಳೆಲ್ಲವನ್ನೂ ಕುಮಾರವ್ಯಾಸ ಕೃಷ್ಣನ ದೈವಿಕ ಸ್ವರೂಪದಲ್ಲಿ ಕಾಣುತ್ತಾನೆ. ಒಂದೇ ಕಾಲದಲ್ಲಿದ್ದ ಈ ಕವಿಗಳ ಉಭಯ ಕೃತಿಗಳನ್ನು ಗಮನಿಸುವಲ್ಲಿ ಯಾರು ಯಾರ ಮೇಲೆ ಪ್ರಭಾವ ಬೀರಿದರು ಎಂಬ ಸಂವಾದಕ್ಕಿಂತ ಎರಡು ಕಾವ್ಯಗಳ ವಸ್ತು, ವಾಕ್ಯಸಂಗತಿ ಸಂಬಂಧವನ್ನು ಅನುಸಂಧಾನಿಸುವುದೇ, ಪರಿಭಾವಿಸುವುದೇ ಆಪ್ಯಾಯಮಾನ ಸಂಗತಿ ಎನಿಸುತ್ತದೆ.

ಅಲ್ಲಮನನ್ನು ಕುರಿತಾದ ವ್ಯಕ್ತಿಜೀವನ ಚಿತ್ರಣ ಪ್ರಭುಲಿಂಗ ಲೀಲೆಯಲ್ಲಿ ಹೇಗೆ ಕಲ್ಪಿತವಾಗಿದೆಯೆಂಬುದಕ್ಕಿಂತ ಅವನನ್ನು ಇದ್ದುದರಲ್ಲಿ ಇತಿಹಾಸಕ್ಕೆ ಸಮೀಪ ನೋಡಿರುವ ಹರಿಹರನ ರಗಳೆಯ ಕಥಾನಕದ ವಸ್ತುಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಬೇಕಾದ ಅಗತ್ಯವಿದೆ. ಪಂಪನು ಮನವಾರೆ ಕೊಂಡಾಡಿದ ಬನವಾಸಿ ಪಟ್ಟಣದಲ್ಲಿಯ ಮಧುಕೇಶ್ವರ ದೇವಾಲಯದಲ್ಲಿ ಅಲ್ಲಮನ ಮನೆತನದ ಹಿರಿಯರು ನಾಗವಾಸಾಧಿಪತಿಗಳಾಗಿದ್ದರು. ಅಲ್ಲಮ ಅಲ್ಲಿ ನಟುವಾಂಗದವನಾಗಿದ್ದ. ದೇವಾಲಯದ ಆವರಣದಲ್ಲಿದ್ದುದರಿಂದ ಆತನು ಸಾಕಷ್ಟು ಓದಿನ ಜ್ಞಾನವನ್ನು ಗಳಿಸಿದ್ದಿರಬೇಕು. ಹೀಗಲ್ಲದಿದ್ದರೆ ಅವನು ದೇವಾಲಯದ ಆವರಣವನ್ನೂ, ಕಾಮಲತೆಯ ಅಂಗಸಂಗವನ್ನೂ ಬಿಟ್ಟ ನಂತರ ಅವನಿಂದ ಅಂಥ ಪ್ರಬುದ್ಧ, ಪ್ರತಿಮಾತ್ಮಕ ವಚನ ವಾಕ್ಯಗಳು ಹೇಗೆ ಸ್ಫುರಿಸಿರಬೇಕು?

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಪ್ರಚಲಿತವಿರುವ ದಂತಕಥೆಗಳು ಹೇಗಿರುತ್ತವೆಂದರೆ ಕವಿಗೋ, ಸಂತನಿಗೋ ಯಾವುದೋ ಒಂದು ಲೌಕಿಕ ಇಲ್ಲವೇ ಅಲೌಕಿಕ ಅನುಭವವಾಗುತ್ತಿದ್ದಂತೆಯೇ ಕಾವ್ಯಸ್ಫುರಣೆ ಆಗಿಬಿಡುವಂತಿರುತ್ತದೆ. ಈಗಾಗಲೇ ಹೇಳಿರುವಂತೆ ಇವು ವ್ಯಾಸ, ವಾಲ್ಮೀಕಿ, ಕಾಳಿದಾಸನಿಂದ ಕುಮಾರವ್ಯಾಸ, ಪುರಂದರದಾಸ, ಕನಕದಾಸರವರೆಗೆ ಕಲ್ಪಿತ ಕಥೆಗಳು ಹಬ್ಬಿ ಹರಡಿ ಅವು ಸುಪ್ರಸಿದ್ಧವೂ ಆಗಿಬಿಟ್ಟಿರುತ್ತವೆ. ಆದರೆ, ಆಯಾ ಕೃತಿಗಳನ್ನು ಅವಲೋಕಿಸುವಲ್ಲಿ ಮಾತ್ರ ಕವಿಯ ಓದು, ಪಾಂಡಿತ್ಯ, ಲೋಕಾನುಭವ, ಕಾವ್ಯಾಭಿವ್ಯಕ್ತಿ, ಒಂದನ್ನೊಂದು ದಾಟುತ್ತ, ಓದುಗರನ್ನು ಮಂತ್ರಮುಗ್ಧಗೊಳಿಸಿ ಅರಿವನ್ನು ವಿಸ್ತರಿಸುವಂತಿರುತ್ತವೆ. ಹೀಗಾಗಿ ದೇವಾಲಯದ ಆವರಣದಲ್ಲಿದ್ದ ಅಲ್ಲಮನಿಗೆ ಮದ್ದಳೆಯ ನಾದದೊಂದಿಗೆ ಅವನು ಅರ್ಜಿಸಿದ್ದ ಜ್ಞಾನಶಕ್ತಿಯೂ, ದೈವಚಿಂತನೆಯೂ ಸಹಜವಾಗಿಯೇ ಇದ್ದಿತು. ಇಂಥ ವ್ಯಕ್ತಿತ್ವವನ್ನು ಕಂಡ ಕಾಮಲತೆ ಅವನನ್ನು ಮೋಹಿಸಿದ್ದರೆ ಆಶ್ಚರ್ಯವಿಲ್ಲ. ಇದನ್ನು ಹರಿಹರ ನೇರವಾಗಿಯೇ ಪ್ರಸ್ತಾಪಿಸುತ್ತಾನೆ. ಇಷ್ಟಾಗಿ ಅದು ಲೋಕದ ಎಲ್ಲ ಭವಿಗಳ ಪ್ರೇಮಸಂಗತಿಯಂತೆ ಆಗಬಾರದೆಂದು ಅದಕ್ಕೊಂದು ಕೈಲಾಸಭಿತ್ತಿ ಒದಗಿಸಿ ತನ್ನ ವರ್ತಮಾನದ ಓದುಗ ಭಕ್ತರನ್ನು ಮೆಚ್ಚಿಸುವ ಪ್ರಯತ್ನಮಾಡುತ್ತಾನೆ. ಅಥವಾ ಎಲ್ಲ ಮಹಾಪುರುಷರ ಹುಟ್ಟಿನ ಸಿದ್ಧಮಾದರಿಯಿಂದ ಅವರನ್ನು ಈ ಲೋಕಕ್ಕೆ ತಂದು ಪ್ರೇಮ ವ್ಯವಹಾರಕ್ಕೆ ನಿಯೋಗಿಸುತ್ತಾನೆ. ಅಂದರೆ ಈಗಾಗಲೇ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಿಗೆ ತಿಳಿದಿರುವಂತೆ ಅಲ್ಲಮ – ಕಾಮಲತೆಯರ ಭೂಲೋಕ ಸಹಜ ಪ್ರೇಮಪತ್ರ ಕೈಲಾಸದಲ್ಲೇ ಸಿದ್ಧವಾಗಿದ್ದಿತೆಂದು ಹೇಳುವ ಕಥೆ.

★★★